ಕರೆದಾಗಲೇ ನನಗೆಚ್ಚರ – ನೆಮ್ಮದಿಯ ಉಸಿರು. ವೀಣೆಯನ್ನು ಪಳಗಿಸಿ, ಪಳಗಿಸಿ, ಅದರ ತಂತಿಯನ್ನು ನಯಮಾಡಿ ನನ್ನ ಬೆರಳುಗಳು ಅದೆಷ್ಟೋ ಸಲ ನೊಯ್ದಿವೆ. ಆದರದು ಸುಖದ ಸಂತೃಪ್ತಿಯ ನೋವು. ಉಪ್ಪರಿಗೆಯ ಮೂಲೆಯಲ್ಲಿ ಅಪ್ಪನ ಶಾಲು ಹೊದ್ದು ಬೆಚ್ಚಗೆ ಮಲಗಿರುತ್ತಿದ್ದ 'ಸ್ವರ' ವನ್ನು ನೋಡಿದಾಗಲೆಲ್ಲ ಏನೋ ಸೆಳೆತ, ನುಡಿಸುವ ಉನ್ಮಾದ ಆಮೇಲೆ ಸಂತಸ.

ನನಗೆ ನನ್ನ ಚಿಕ್ಕ ಹೆಂಚಿನ ಮನೆಯೇ ಅರಮನೆ – ಮೂಡಣದ ಅರಮನೆ. ತೋಟದಲ್ಲಿ ಬೆಳೆದ ಬೆಳೆ ಚೀಲಕ್ಕೆ ತುಂಬಿ ನಡುಮನೆಗೆ ತಂದು ಪೇರಿಸಿಟ್ಟರೆ ಆ ಚೀಲಗಳೇ ಅರಮನೆಯ ರತ್ನ ಖಚಿತ ಕಂಬಗಳು. ಅದರ ಮೇಲೇರಿ ಕುಳಿತು ಬೀಗಿದರೆ ಅದೇ ಸಿಂಹಾಸನ. ಹಲವೊಮ್ಮೆ ಹಾಗೇ, ಕೂತಲ್ಲೇ ಆಡುತ್ತ ನಿದ್ದೆ ಹೋದಾಗ ಯಾವಾಗಲೋ ಅಮ್ಮ ಬಂದು ಹಾಲು ಕುಡಿಸಿದ ನೆನಪು. ಹೊದಿಕೆ ಹೊದಿಸಿದ ನೆನಪು. ರಾತ್ರಿ ಚೀಲಗಳ ಮೇಲಿಂದ ಉರುಳುರುಳುತ್ತ ಎತ್ತಲೋ ಹೋಗಿ ಮಲಗಿದ ನನ್ನ ಅಪ್ಪ ಎತ್ತಿ ಪಲ್ಲಂಗದಲ್ಲಿ ಮಲಗಿಸುತ್ತಿದ್ದ. ಅಪ್ಪನ ಮೃದು ಮಾತು ಕೇಳುತ್ತ ಅವನೊಂದಿಗೆ ಬೆಳಗುಗಳಲ್ಲಿ ತೋಟ; ನದಿದಂಡೆ ಸುತ್ತುತ್ತ ಬೆಳೆದ ನನಗೆ ಬಾಲ್ಯ ಅರಳಿ ಮಾಗಿ ಯೌವ್ವನ ಬಂದದ್ದು ಗೊತ್ತಾಗಲೇ ಇಲ್ಲ! ಎದೆಯ ತುಂಬಾ ಕನಸುಗಳು ತುಂಬಿಕೊಂಡು ದಿನವೂ ಬೆಳೆಯುತ್ತಿದ್ದ ನನ್ನನ್ನು ಕಂಡಾಗಲೆಲ್ಲ ಅಪ್ಪ ಹೇಳುತ್ತಿದ್ದ – ಎಂಥ ಚೆಲುವೆ ಮಗೂ ನೀನು! ಎಷ್ಟೆಂದರೂ ನನ್ನ ಮಗಳು! ಹಾಗೆಯೇ ಅವನಿಗೆ ಯಾವಾಗಲೂ ನನ್ನ ಮದುವೆಯ ಚಿಂತೆ. ನನಗೋ ಅಪ್ಪನೆದುರು ವೀಣೆ ನುಡಿಸುತ್ತ ಜಗತ್ತನ್ನೇ ಮರೆಯುವ ಬಯಕೆ. ಆಗೆಲ್ಲ ಅಪ್ಪಅಮ್ಮ ನನ್ನನ್ನು ಈ ಲೋಕಕ್ಕೆಳೆತರುತ್ತಿದ್ದರು. ಮದುವೆಯ ಮಾತಾಡುತ್ತಿದ್ದರು. ಅಮ್ಮ ಬಿಗಿದಪ್ಪಿ ಸುನಯನಾ, ನಿನ್ನ ಹೆಜ್ಜೆ–ಗೆಜ್ಜೆಗಳ ದನಿಯಲ್ಲದ; ನಿನ್ನ ನುಡಿಗಳಿಲ್ಲದ ಈ ಮನೆಯಲ್ಲಿ ಇರುವುದಾದರೂ ಹೇಗೆ? ನನಗಾಗ ಗಂಟಲು ತುಂಬಿ ಬಂದು ಅತ್ತುಬಿಡುತ್ತಿದ್ದೆ. ಮರುಕ್ಷಣ ಅಮ್ಮ ಅಪರೋಕ್ಷವಾಗಿ ಮದುವೆಯ ಮಾತನಾಡುತ್ತಿದ್ದಾಳೆಂದು ಕೋಪ ಬರುತ್ತಿತ್ತು.

ಅಪ್ಪಅಮ್ಮ ನನ್ನನ್ನು ದೂರ ಮಾಡುತ್ತಿದ್ದಾರೆಂದು ನನಗನ್ನಿಸುತ್ತಿತ್ತು. ಅಪ್ಪನಿಗೆ ನಾನಾಗ ಹೇಳುತ್ತಿದ್ದೆ – ನನ್ನ ಅಭಿರುಚಿ, ಸಾಹಿತ್ಯ, ಸಂಗೀತಕ್ಕೆ ಒಗ್ಗಿಕೊಳ್ಳದ, ನನ್ನ ಬೇಕುಗಳಿಗೆ ಸ್ಪಂದಿಸದ ಹುಡುಗನನ್ನು ನಾನು ಮದುವೆಯಾಗಲಾರೆ. ಅಪರಿಚಿತ ವ್ಯಕ್ತಿಯೊಡನೆ ಬದುಕಿಡೀ ಕಳೆಯಲಾರೆ. ನಿನ್ನಿಷ್ಟ ಬಂದವರನ್ನೇ ಮದುವೆಯಾಗು ಮಗೂ! ಎನ್ನುತ್ತಿದ್ದರು ಅಪ್ಪ. ಅಪ್ಪ ಎಷ್ಟು ಧಾರಾಳಿ, ಎಂಥ ಸ್ವತಂತ್ರ ಮನೋಭಾವ! ನಾನೇನೆಂದು ನನಗಿಂತ ಅವರೇ ಚೆನ್ನಾಗಿ ಬಲ್ಲವರಂತೆ ಎಲ್ಲ ಹೇಳಿಬಿಡುತ್ತಿದ್ದರು. ನಾನೆಂದೂ ಬಲವಂತ ಸಹಿಸುವವಳಲ್ಲವೆಂದು; ಮನಸ್ಸಿಗೊಪ್ಪದ ಯಾವೆಂಥ ಪ್ರೀತಿಯೂ ಸ್ವೀಕರಿಸುವವಳಲ್ಲವೆಂದು ಅವರಿಗೆ ಗೊತ್ತಿತ್ತು. ನಿನ್ನ ಗಂಡನನ್ನು ಯಾವಾಗ ಹುಡುಕುತ್ತಿ ಮಗು! ಎಂದವರು ತುಂಟತನದಲ್ಲಿ ಕೇಳಿದಾಗ ನಾನು ನಾಚಿ ಉಪ್ಪರಿಗೆಗೆ ಓಡುತ್ತಿದ್ದೆ.

ಉಪ್ಪರಿಗೆಯಲ್ಲಿ ಚಿತ್ತ ಚಿತ್ತಾರದ ಕೆತ್ತನೆಯ ಕಪ್ಪು ಮಂಚ. ಮೆತ್ತೆಯ ಹಾಸಿನ ಮೇಲೆ ಅಪ್ಪನ ಶಾಲು ಹೊದ್ದ ನನ್ನ ವೀಣೆ – 'ಸ್ವರ'! ನಾನೋ ರಾತ್ರಿಯೆಲ್ಲ ಮೆತ್ತೆಗೊರಗಿ ಸ್ವರವನ್ನು ಝೇಂಕರಿಸುತ್ತ ನಕ್ಷತ್ರಗಳನ್ನು ಲೆಕ್ಕ ಹಾಕುತ್ತಿದ್ದೆ. ಚಂದ್ರ ಪಯಣಿಸುವ ದಿಕ್ಕನ್ನು ತದೇಕ ಗಮನಿಸುತ್ತಿದ್ದೆ. ಬೆಳ್ಳನೆಯ ಚಂದ್ರನನ್ನು ಮನದಲ್ಲಿ ತುಂಬಿಕೊಂಡು ನಾನು ವರಿಸುವ ಹುಡುಗನ ಬಗ್ಗೆ ಕನಸು ಹೆಣೆಯುತ್ತಿದ್ದೆ. ಆಕಾಶವೇರುತ್ತಿದ್ದೆ. ಆಕಾಶಕ್ಕೇರಲು ವೀಣೆ ಸ್ವರಗಳ ಮೆಟ್ಟಿಲು ನನಗೆ ಗೊತ್ತಾಗದೆ ಬೆಳಗಾದಾಗ ಎಷ್ಟೋ ಸಲ ವೀಣೆಯ ಮೇಲೆ ತಲೆಯಿಟ್ಟು ನಿದ್ರಿಸಿಬಿಡುತ್ತಿದ್ದೆ!